ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ವಿಷಯದ ಗಂಭೀರತೆಯನ್ನು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಮತ್ತೆ ಸರ್ಕಾರ ಮಾಡಿರತಕ್ಕ ತಪ್ಪು , ಸರ್ಕಾರ ಎಂದರೆ ಸರ್ಕಾರದ ಅಧಿಕಾರಿಗಳು ಮಾಡಿರತಕ್ಕ ತಪ್ಪಿನ ವಿಚಾರವನ್ನು ಬಯಲಿಗೆ ಎಳೆಯಬೇಕು. ಇದರ ಬಗ್ಗೆ ಸವಿಸ್ತಾರವಾಗಿ ಈ ಸದನದಲ್ಲಿ ಚರ್ಚೆ ಆಗಬೇಕು. ಚರ್ಚೆಗಳ ಬದಲಾಗಿ ಕೂಗಾಟ, ಅರಚಾಟಗಳಿಂದ ಏನೂ ಉಪಯೋಗ ಆಗುವುದಿಲ್ಲ ಎನ್ನತಕ್ಕ ಒಂದು ವಿಚಾರದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರತಕ್ಕವನು ನಾನು. ನಾನಾದರೂ ತಮ್ಮಲ್ಲಿ ಮನವಿ ಮಾಡುತ್ತೇನೆ..

ಅಧ್ಯಕ್ಷರು : ಈಗ ಪ್ರಶ್ನೋತ್ತರವನ್ನು ಹಾಕುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಈಗ ಗಂಟಲುಗಳಿಗೇ ಬಹಳ ದೊಡ್ಡ ಮಾನ್ಯತೆ ಸಿಗುತ್ತದೆ ಎಂದರೆ ನಾವೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ನಾನಾದರೂ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ, ಈಗ ನಮ್ಮ ಗೌರವಾನ್ವಿತ ಸದಸ್ಯರುಗಳು ಯಾರು ಇದ್ದಾರೆ, ಅವರಿಗೆ ಒಂದು ಹಕ್ಕು ಇದೆ, ಪ್ರಶ್ನೆಗಳಿಗೆ ಉತ್ತರವನ್ನು ತೆಗೆದುಕೊಳ್ಳತಕ್ಕದ್ದು. ಈ ಒಂದು ಹಕ್ಕಿಗೆ ಧಕ್ಕೆ ಬರಬಾರದು ಎಂದು ನಮ್ಮೆಲ್ಲರಿಗೂ ಸಹ ಇದೆ. ಆದರೆ ಪರಿಸ್ಥಿತಿಯ ಗಂಭೀರತೆ ತಮಗೆ ಅರ್ಥ ಆಗಿದೆ. ಏನಾಗಿದೆಯೆಂದು ನಾವು ಖುದ್ದಾಗಿ ಭೇಟಿ ಆಗಿ ತಮಗೆ ತಿಳಿಸಿದ್ದೇವೆ. ಈ ಸದನದಲ್ಲಿ ಬೇಕಾದಷ್ಟು ಉದಾಹರಣೆಗಳು ಇವೆ. ಹಿಂದೆ ಇಂತಹ ವಿಚಾರ ಭಂದಂತಹ ಸಂದರ್ಭದಲ್ಲಿ ಮಲ್ಲಾರಿಗೌಡರು ಮುಖ್ಯ ಸಚೇತರಾಗಿದ್ದ ಸಂದರ್ಭದಲ್ಲಿ ಪ್ರಶ್ನೋತ್ತರವನ್ನು ರದ್ದು ಮಾಡಿ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಟ್ಟಿರತಕ್ಕ ಅನೇಕ ಉದಾಹರಣೆಗಳು ಇವೆ. ಆದರೂ ಸಹ ತಮ್ಮ ಸ್ಥಾನಕ್ಕೆ ನಾವು ಗೌರವ ಕೊಡಬೇಕು ಎನ್ನುವ ಒಂದೇ ಒಂದು ಕಾರಣದಿಂದ ಇವತ್ತು ಮಾನ್ಯ ಯಡಿಯೂರಪ್ಪನವರು ಅಥವಾ ವಾಟಾಳ್ ನಾಗರಾಜ್ ಅವರು ಏನು ಒಂದು ಪ್ರತಿಭಟನೆಯನ್ನು ಮಾಡಿದ್ದಾರೆ ಅದಕ್ಕೆ ಸಂಪೂರ್ಣವಾದ ಸಹಾನುಭೂತಿ ಇದೆ. ನಾವು ಹೊರಗಡೆ ಹೋಗಬೇಕು. ಆದರೆ ಗೌರವಾನ್ವಿತ ಸದಸ್ಯರ ಹಕ್ಕಿಗೆ ಚ್ಯುತಿ ಬರಬಾರದು ಎನ್ನುವ ಒಂದೇ ಒಂದು ಕಾರಣದಿಂದ, ಈ ಒಂದು ಸಂಸತ್ತಿನ ವ್ಯವಹಾರಗಳಲ್ಲಿ ಸತ್ಸಂಪ್ರದಾಯವನ್ನು ಹಾಕಬೇಕು ಎನ್ನುವ ಇಚ್ಛೆ ಇರುವುದರಿಂದ ನಮ್ಮ ಮನಸ್ಸಿನಲ್ಲಿ ಎಷ್ಟೇ ದುಃಖವಿದ್ದರೂ ಸಹ ತಾವು ನಮ್ಮ ನಿಲುವಳಿ ಸೂಚನೆಗೆ ಪ್ರಶ್ನೋತ್ತರದ ನಂತರದ ಅವಕಾಶವನ್ನು ಕೊಡುತ್ತೇನೆಂದು ಹೇಳಿರುವುದರಿಂದ ಅವರಲ್ಲಿ ನಂಬಿಕೆಯನ್ನು ಇಟ್ಟು ಅದುವರೆಗೆ ಸಹ ತಮಗೆ ಸಹಕಾರ ಕೊಡುತ್ತೇವೆ.

<u>ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.</u>

ವಿಷಯ: ಬಿಡದಿ ಹತ್ತಿರ ಜಪಾನ್ ಟೌನ್‌ಶಿಪ್ ಕೈಗಾರಿಕಾ ನಗರ

Q: 1070

ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಡದಿ ಮತ್ತು ಸಾತನೂರಿನ ರೈತರು ಮತ್ತು ಇತರೆ ಗ್ರಾಮಸ್ಥರುಗಳೊಂದಿಗೆ ಸರ್ಕಾರವು ಆ ಸ್ಥಳದಲ್ಲಿ ಸ್ಥಾಪಿಸಲಿರುವ ಜಪಾನೀ ಕೈಗಾರಿಕಾ ನಗರದ ಬಗ್ಗೆ ಚರ್ಚಿಸಿದೆಯೇ?

ಆ) ಹಾಗಿದ್ದಲ್ಲಿ ,ಸರ್ಕಾರವು ರೈತರನ್ನುಮನವೊಲಿಸುವಲ್ಲಿ ಯಶಸ್ಸನ್ನು ಸಾಧಿಸಿದೆಯೆ?

ಇ) ಹಾಗಿಲ್ಲದಿದ್ದಲ್ಲಿ, ಸರ್ಕಾರವು ಉದ್ದೇಶಿತ ಕೈಗಾರಿಕಾ ನಗರ ಸ್ಥಾಪನೆಗೆ ಅನುಮೋದನೆ ನೀಡುವುದಿಲ್ಲವೆಂದು ಒಪ್ಪಲಾಗಿದೆಯೇ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು.

ಆ) ರೈತ ಹಾಗೂ ಇತರೆ ಮುಖಂಡರ ಜೊತೆ ಮೊದಲಿನ ಸುತ್ತಿನ ಸಭೆ ದಿನಾಂಕ : 3-2-93 ರಂದು ನಡೆಸಲಾಗಿದೆ. ಈ ಸಭೆ ಅಪೂರ್ಣವಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೇ, ಈ ಜಪಾನೀಸ್ ಕಾಲೋನಿಯನ್ನು ಮಾಡತಕ್ಕದ್ದರಿಂದ ಈ ರಾಜ್ಯ ಸರ್ಕಾರಕ್ಕೆ ಅಥವಾ ಈ ರಾಜ್ಯಕ್ಕೆ ಏನೇನು ಉಪಯೋಗಗಳು ಇವೆ ಎಂಬುದನ್ನು ದಯಮಾಡಿ ಮಾನ್ಯ ಮಂತ್ರಿಗಳು ತಿಳಿಸಬೇಕು. ಮತ್ತು ಇದನ್ನು ಮಾಡತಕ್ಕಂಥ ಸಂದರ್ಭದಲ್ಲಿ ಭೂಮಿಯನ್ನು ಕಳೆದುಕೊಂಡಿರತಕ್ಕವರು ಹಾಗೂ ಜಪಾನ್ ಟೌನ್‌ಶಿಪ್ ಅಲ್ಲಿ ತಲೆಯೆತ್ತುವ ಪರಿಣಾಮವಾಗಿ ನೇರವಾಗಿ ತೊಂದರೆ ಅನುಭವಿಸತಕ್ಕಂಥ ರೈತರ ಜೀವನದ ಬದಲಿ ವ್ಯವಸ್ಥೆಗೆ ರಾಜ್ಯ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೆ?

ಶ್ರೀ ನಾಗಮ್ಮ ಕೇಶವಮೂರ್ತಿ : ಮಾನ್ಯ ಅಧ್ಯಕ್ಷರೆ, ಜಪಾನೀಸ್ ಕಾಲೋನಿ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಶ್ನೆ ಕೇಳಿದ್ದಾರೆ, ಇದರ ಬಗ್ಗೆ ಮೊದಲಿನಿಂದಲೂ ಜನರಲ್ಲಿ ಒಂದು ರೀತಿಯ ತಪ್ಪು ಕಲ್ಪನೆ ಮೂಡಿದೆಯೆಂಬುದು ನನ್ನ ಭಾವನೆ.ಇದು ಜಪಾನೀಸ್ ಕಾಲೋನಿಯಲ್ಲ. ಜಪಾನ್ ಸರ್ಕಾರ ಮತ್ತು ಭಾರತ ಸರ್ಕಾರ ಒಂದು ಯೋಜನೆ ತಯಾರಿಸಿ ಭಾರತದಲ್ಲಿ ಒಂದು ಮಾದರಿ ಕೈಗಾರಿಕಾ ನಗರ ಸ್ಥಾಪಿಸುವ ತೀರ್ಮಾನ ಕೈಗೊಂಡಿದ್ದು, ಇದಕ್ಕಾಗಿ ಕೈಗಾರಿಕೆ ಸ್ಥಾಪಿಸಲು ಸೂಕ್ತ ಪ್ರದೇಶದ ವಿವರಗಳನ್ನು ಕೊಡಬೇಕೆಂದು ಎಲ್ಲಾ ರಾಜ್ಯಗಳಿಗೆ ಪತ್ರ ಬರೆದಿತ್ತು. ಅದರ ಪ್ರಕಾರ ನಮ್ಮ ರಾಜ್ಯದ ರಾಮನಗರ ತಾಲ್ಲೂಕಿನ ಬಿಡದಿ ಹತ್ತಿರ ಮತ್ತು ಕನಕಪುರ ತಾಲ್ಲೂಕಿನ ಸಾತನೂರು ಬಳಿ ಕೈಗಾರಿಕೆ ಸ್ಥಾಪಿಸಲು ಜಾಗ ಇದೆಯೆನ್ನುವ ವಿವರವನ್ನು ಅವರಿಗೆ ತಿಳಿಸಿದ್ದೇವೆ. ಇದೇ ರೀತಿ ಬೇರೆ ರಾಜ್ಯಗಳೂ ಸಹ ಅಂದರೆ ಉತ್ತರ ಪ್ರದೇಶದಲ್ಲಿ 'ನಾಯ್ಡ' ಹಾಗೂ ಹರಿಯಾಣ ರಾಜ್ಯದಲ್ಲಿ ಕೊರೊಗಾಂವ್ ಜಾಗಗಳಲ್ಲಿ ಕೈಗಾರಿಕೆ ನಿರ್ಮಿಸಲು ಸ್ಥಳ ಕೊಡುವುದಕ್ಕೆ ತಯಾರಿದ್ದೇವೆಂದು ಆ ರಾಜ್ಯಗಳವರು ಈಗಾಗಲೇ ಪತ್ರ ಬರೆದಿದ್ದಾರೆ. ಇದಾದ ನಂತರ ಜಪಾನಿನ 'ಜೈಕಾ' ಪರಿಶೀಲನಾ ಸಮಿತಿಯವರು ನಮ್ಮ ರಾಜ್ಯಕ್ಕೆ 2-3 ಸಲ ಭೇಟಿ ಕೊಟ್ಟಿದ್ದಾರೆ. ನಂತರ ಮಾದರಿ ಕೈಗಾರಿಕಾ ನಗರವನ್ನು ಸ್ಥಾಪಿಸಲು ಸೂಕ್ತ ಸ್ಥಳವೆಂದು ತಾವು ಸಮೀಕ್ಷೆ ಮಾಡಿದ ಸ್ಥಳದ ಬಗ್ಗೆ ಸಹಿ ಹಾಕಿದ ಒಂದು ವರದಿಯನ್ನು ದಿನಾಂಕ 7-8-1992 ರಲ್ಲಿ ಕೊಟ್ಟಿದ್ದಾರೆ. ಮಾದರಿ ಕೈಗಾರಿಕಾ ನಗರ ಎಲ್ಲಿ ಸ್ಥಾಪನೆಯಾಗಬೇಕೆಂಬುದು ಈ ವರ್ಷಾಂತರದೊಳಗೆ ಗೊತ್ತಾಗುತ್ತದೆ. ಕೈಗಾರಿಕಾ ನಗರ ಹರಿಯಾಣದಲ್ಲಿ ಸ್ಥಾಪನೆಯಾಗುತ್ತದೆಯೇ? ಉತ್ತರ ಪ್ರದೇಶದಲ್ಲಿ ಸ್ಥಾಪನೆಯಾಗುತ್ತದೆಯೇ? ಇಲ್ಲವೆ ನಮ್ಮ ರಾಜ್ಯದಲ್ಲಿ ಸ್ಥಾಪನೆಯಾಗುತ್ತದೆಯೇ? ಈ ಕುರಿತು ಅವರು ತಮ್ಮ ವರದಿಯನ್ನು

ಈ ವರ್ಷಾಂತರದೊಳಗೆ ಒಪ್ಪಿಸುತ್ತಿದ್ದಾರೆ. ಮಾದರಿ ಕೈಗಾರಿಕಾ ನಗರವನ್ನು ಎಲ್ಲಿ ಸ್ಥಾಪಿಸಬೇಕೆಂದು ನಿರ್ಧಾರ ಮಾಡತಕ್ಕಂಥವರು ಜಪಾನ್ ಮತ್ತು ಭಾರತ ಸರ್ಕಾರದವರು. ಜಪಾನಿನ 'ಜೈಕಾ' ತಂಡದವರು ನಮ್ಮ ರಾಜ್ಯಕ್ಕೆ ಈ ಹಿಂದೆ ದಿನಾಂಕ 7.8.92 ರಲ್ಲಿ ಭೇಟಿ ಕೊಟ್ಟಿದ್ದು ಮತ್ತು ಇತ್ತೀಚೆಗೆ ಅಂದರೆ 3.2.93 ರಲ್ಲೂ ಸಹ ಭೇಟಿ ಕೊಟ್ಟಿದ್ದು, ಆಗ ರಾಜ್ಯದಲ್ಲಿನ ಕೆಲವಾರು ಜನರು ಈ ಜಪಾನಿ ಟೌನ್‌ಶಿಪ್ ಸ್ಥಾಪನೆ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ, ಇಲ್ಲಿ ಒಂದು ತಪ್ಪು ಕಲ್ಪನೆ ಜನರಲ್ಲಿದೆ. ಏನೆಂದರೆ, ಈ ಜಾಗವನ್ನು ನಾವು ಜಪಾನ್ ದೇಶದವರಿಗೆ ಕೊಟ್ಟರೆ ಅವರು ಅಲ್ಲೇ ನೆಲೆಸಿ ಇಂಡಸ್ಟ್ರಿಯಲ್ ಟೌನ್‌ಶಿಪ್ ಅನ್ನು ಅಭಿವೃದ್ಧಿ ಮಾಡುತ್ತಾರೆನ್ನುವುದು. ಆದರೆ, ಅವರ ಪಾತ್ರ ಏನಿದ್ದರೂ ಅದು ಕನ್ಸಲ್‌ಟೆನ್ಸಿಗೆ ಮಾತ್ರ ಸೀಮಿತವಾಗಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ಅವರು ಅಲ್ಲಿ ಮಾಡತಕ್ಕಂಥ ಕೆಲಸವೆಂದರೆ, " To develop all infrastructural facilities needed to establish hi-tech industries to international standards." ಆ ಸ್ಥಳದಲ್ಲಿ ಯಾರ್ಯಾರು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದೆಂದರೆ, ಬಹು ರಾಷ್ಟ್ರೀಯ ಸಂಸ್ಥೆಗಳವರು ಬರಬಹುದು, ಅನಿವಾಸಿ ಭಾರತೀಯರು ಬರಬಹುದು ಅಲ್ಲದೆ, ರಾಜ್ಯದಲ್ಲಿರುವ ಉದ್ಯಮಶೀಲರಿಗೂ ಸಹ ಸ್ವಾಗತವಿದೆ, ರಾಜ್ಯದ ಹೊರಗಿನವರಿಗೂ ಕೂಡ ತೆರೆದ ಸ್ವಾಗತವಿದೆ. ಆ ಸ್ಥಳದಲ್ಲಿ ಇನ್ನೂ ಕೈಗಾರಿಕೆ ಸ್ಥಾಪನೆಯಾಗುವುದರ ಬಗ್ಗೆ ನಿರ್ಧಾರವಾಗದಿರುವುದರಿಂದ ಈ ಕುರಿತು ಯೋಜನೆ ಮಾಡಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾದರಿ ಕೈಗಾರಿಕಾ ನಗರ ಸ್ಥಾಪಿಸಲು ರಾಜ್ಯ ಸರ್ಕಾರದ ಪಾಲುಗಾರಿಕೆ ಏನಾದರೂ ಇದೆಯೆ? ಇದ್ದರೆ, ಎಷ್ಟು ಪಾಲುಗಾರಿಕೆ ಇದೆ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ : ನಾವು ಯಾವ ಮಟ್ಟದಲ್ಲಿ ಪಾಲ್ಗೊಳ್ಳಬಹುದೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ಜಪಾನ್ ಸರ್ಕಾರದವರು ನಮಗೆ ಕೇಳಿರುವುದೇನೆಂದರೆ ಕೈಗಾರಿಕೆ ಸ್ಥಾಪಿಸಲು ನೀವು ಜಾಗ ಕೊಡುವುದಕ್ಕೆ ತಯಾರಾಗಿದ್ದೀರಾ? ತಯಾರಾಗಿದ್ದರೆ ಆ ಜಾಗ ಎಲ್ಲಿದೆ? ಅಲ್ಲಿ ಏನೇನು ಇನ್‌ಫ್ರಾಸ್ಟ್ರಕ್ಚರ್ ಫೆಸಿಲಿಟೀಸ್ ಇವೆ? ನೀರಿನ ಅನುಕೂಲತೆ ಇದೆಯೇ? ವಿದ್ಯುಚ್ಛಕ್ತಿ ಸೌಕರ್ಯವಿದೆಯೇ? ಹವಾಗುಣ ಮುಂತಾದುವುಗಳ ವಿವರ ಕೇಳಿದ್ದು, ಅವೆಲ್ಲವನ್ನೂ ಒದಗಿಸಿದ್ದೇವೆ.

ಶ್ರೀಮತಿ ದಮಯಂತಿ ಬೋರೇಗೌಡ : ಈ ದೇಶಕ್ಕೆಲ್ಲ ಒಂದೇ ಒಂದು ಪ್ರಾಜೆಕ್ಟ್ ಕೊಡುತ್ತಿರುವುದರಿಂದ, ಒಂದು ಸ್ಥಳವಲ್ಲದೆ ಇನ್ನೂ 2-3 ಸ್ಥಳಗಳನ್ನು ಕೈಗಾರಿಕೆ ಸ್ಥಾಪಿಸಲು ಅವರಿಗೆ ಏಕೆ ಸೂಚಿಸಲಿಲ್ಲ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ : ಈಗಾಗಲೇ ನಾನು ಹೇಳಿದ ಹಾಗೇ ಬೇರೆ ಬೇರೆ ರಾಜ್ಯಗಳಲ್ಲಿ ಒಂದೇ ಸ್ಥಳವನ್ನು ಸೂಚಿಸಿದ್ದರೂ, ನಾವು ನಮ್ಮ ರಾಜ್ಯದ ಎರಡು ಸ್ಥಳಗಳನ್ನು ಸೂಚಿಸಿದ್ದೇವೆ. ಯಾವುದೆಂದರೆ, ರಾಮನಗರ ತಾಲ್ಲೂಕಿನ ಬಿಡದಿ ಬಳಿ ಮತ್ತೊಂದು ಕನಕಪುರ ತಾಲ್ಲೂಕಿನ ಸಾತನೂರಿನ ಬಳಿ. ಈ ಎರಡು ಜಾಗಗಳನ್ನು ನಾವು ಸೂಚಿಸಿದ್ದೇವೆ.

ವಿಷಯ : ಪರಿಶಿಷ್ಟ ಜಾತಿಯವರ ಮೇಲೆ ಸಾಮಾಜಿಕ ಬಹಿಷ್ಕಾರ